ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಅಭಿಯಂತರರ ಕಛೇರಿ, ವಡ್ ಸಂಖ್ಯೆ164, ವಿದ್ಯಾಪೀಠವರ್ಡ್, ವಿದ್ಯಾಪೀಠಸರ್ಕಲ್, ಬೆಂಗಳೂರು

ಸಂಖ್ಯೆ: ಸ.ಆ/ವಾ–164/ಪಿಆರ್/ 01/21–22 ದಿನಾಂಕ: 06–04–2021

# ಮಾಸಿಕ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು–ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/ 35/ 2020–21, ದಿನಾಂಕ:21–09–2021 ರ ಆದೇಶದಂತೆ ದಿನಾಂಕ:03–04–2021 ಶನಿವಾರ ದಂದು ವಾರ್ಡ್ ಸಂಖ್ಯೆ 164, ವಿದ್ಯಾಪೀಠ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ನಡವಳಿಗಳು.

******

**ಸ್ಥಳ–** ವಾರ್ಡ್ 164ರ ವಿದ್ಯಾಪೀಠ ವಾರ್ಡ್ ಕಛೇರಿಯಲ್ಲಿ
**ಸಮಯ– ದಿನಾಂಕ:03–4–2021** ರಂದು 3.30 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ.ವಿಜಯಕುಮಾರ್.ಆರ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ.ಪಿ.ಜನಾರ್ಧನ್ | ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಗಿರಿನಗರ ಉಪವಿಭಾಗ |
| 3 | ಶ್ರೀಮತಿ. ಬಿ.ಶ್ವೇತಾ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು, ವಾರ್ಡ್–164, ವಿದ್ಯಾಪೀಠ |
| 4 | ಶ್ರೀ.ಸುನಿಲ್ | ಹಿರಿಯ ಆರೋಗ್ಯ ಪರಿವೀಕ್ಷಕರು (ಬಸವನಗುಡಿ ವಲಯ) |
| 5 | ಶ್ರೀ.ಸುರೇಶ | ಕಂದಾಯ ಪರಿವೀಕ್ಷಕರು , ವಾರ್ಡ್ ಸಂ.164 |
| 6 | ಶ್ರೀಮತಿ.ಲಕ್ಷ್ಮಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾಡ್ ನಂ.164 |
| 7 | ಶ್ರೀ.ವಿಶಕಂಠಯ್ಯ | Work Inspector, ವಾಡ್ ನಂ.164 |
| 8 | ಡಿ.ರಾಜು | ವಾರ್ಡ್ ಹಿರಿಯ ನಾಗರಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ.ವಿಜಯಕುಮಾರ್ ರವರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಿದರು.

1) ಪ್ರಥಮತಃ ಶ್ರೀ.ಸುನಿಲ್, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, 2 ವಾರಗಳಿಂದ ವಾರ್ಡ್ ವ್ಯಾಪ್ತಿಯಲ್ಲಿ ಮೊಬೈಲ್, ಪರೀಕ್ಷ ಕೇಂದ್ರಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಟೆಸ್ಟ್‌ಗಳನ್ನು ನಡೆಸಲಾಗುತ್ತಿದ್ದು. ಕೋವಿಡ್19 ನಿಯಂತ್ರಣಕ್ಕೆ ಎಲ್ಲಾ ಎರುಪಟ್ಟು ಮಾಡಲಾಗುತ್ತಿದೆ.
2) ವಾರ್ಡ್‌ನಲ್ಲಿ ಕೋವಿಡ್–19ರ ಪ್ರಕರಣಗಳು ಹೆಚ್ಚಾಗದಂತೆ ಜಾಗ್ರತೆ ವಹಿಸಲು ಆರೋಗ್ಯ ಇಲಾಖೆಯವರಿಗೆ ಸಮರ್ಪಕವಾಗಿ ಔಷಧಿ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳಲು, ವಾರ್ಡ್ ವ್ಯಾಪ್ತಿಯಲ್ಲಿ ಜನಸಂದಣಿ ಪ್ರದೇಶಗಳಲ್ಲಿ ಸಾರ್ವಜನಿಕ ಅಂತರ ಕಾಪಾಡಿಕೊಳ್ಳುವುದು ಹಾಗೂ ಮಾಸ್ಕ್ ಧರಿಸುವುದರ ಬಗ್ಗೆ ಅರಿವು ಮೂಡಿಸಲು ಸಹ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಗಿರುತ್ತದೆ.

ಪು.ತಿ.ನೋ

3) ಮುಂದುವರೆದು ಸಹಾಯಕ ಅಭಿಯಂತರರವರು ಮಾತನಾಡಿ ಮಳೆಹಾನಿಯಿಂದ ಹದಗೆಟ್ಟ, ವಾರ್ಡ್ ವ್ಯಾಪ್ತಿಯಲ್ಲಿರುವ ರಸ್ತೆಗುಂಡಿಗಳ ವಿವರಗಳನ್ನು ಸಭೆಯಲ್ಲಿ ಚರ್ಚಸುತ್ತಾ, 14 ಪ್ರಮುಖ ರಸ್ತೆಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಬನಶಂಕರಿ 1ನೇ ಹಂತದ 7ನೇ ಅಡ್ಡರಸ್ತೆ, 7 ಮತ್ತು 8ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಅಶೋಕನಗರದ 2, 6, 7, 8ನೇ ಅಡ್ಡರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಸಭೆಗೆ ತಿಳಿಸಿರುತ್ತಾರೆ. ಮಳೆಗಾಲದಲ್ಲಿ ವಾರ್ಡ್‌ವ್ಯಾಪ್ತಿಯಲ್ಲಿ ರಸ್ತೆಗಳು ಹದಗೆಟ್ಟು, ಗುಂಡಿಗಳು ಬಿದ್ದು ಸಾರ್ವಜನಿಕರಿಕೆ, ವಾಹನಸಂಚಾರರಿಗೆ ತೊಂದರೆಯಗುತ್ತಿದ್ದುದನ್ನು ನೋಡಲ್ ಅಧಿಕಾರಿಗಳು ಪ್ರಸ್ತಾಪಿಸಿ, ಎಲ್ಲಾ ರಸ್ತೆಗುಂಡಿಗಳನ್ನು ಪರಿವೀಕ್ಷಿಸಿ ಗುರುತಿಸಿ, ತುರ್ತಾಗಿ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ವಾರ್ಡ್ 164ರ ಇಂಜಿನಿಯರ್‌ರವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

4) ನೋಡಲ್ ಅಧಿಕಾರಿಗಳು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಅಗೆತ ಕಾರ್ಯಗಳನ್ನು ಪತ್ತೆಹಚ್ಚಲಾಗಿದಿಯೆ.ಈ ವಿಷಯದಲ್ಲಿ ಸಾರ್ವಜನಿಕರಿಂದ ದೂರಾಗಲ್ಲಿ ಪೋಲಿಸರಿಂದ ದೂರುಗಳಾಗಲ್ಲಿ ಸ್ವೀಕರಿಸಲಾಗಿದೆಯೆಂದು ಪರಿಶೀಲಿಸಲು ಸೂಚಿಸಿರುತ್ತಾರೆ.

5) ಮುಂದುವರೆದು ಬೆಸ್ಕಾಂ ಇಲಾಖೆ ವತಿಯಿಂದ ಈಗಾಗಲೇ ಅಗೆದಿರುವ ರಸ್ತೆಗಳನ್ನು ಸರಿಪಡಿಸಿ ಅಗೆದಿರುವ ಹೆಚ್ಚುವರಿ ಮಣ್ಣನ್ನು ತೆರವುಗೊಳಿಸಲು ಸೂಚಿಸಲಾಗಿದೆ ಹಾಗೂ ಬೆಸ್ಕಾಂ ರವರ ಕಡಿದಿರುವ ಮರದ ಕೊಂಬೆಗಳನ್ನು ಇಂಜಿನಿಯರ್ ಇಲಾಖೆ ವತಿಯಿಂದ ತೆರವುಗೊಳಿಸಲು ತಿಳಿಸಲಾಗಿದೆ.

6) ವಾರ್ಡ್ ವ್ಯಾಪ್ತಿಯಲ್ಲಿ ಮುಂದುವರೆದ ಮತ್ತು ಬೆಸ್ಕಾಂ ಕಾಮಗಾರಿಗಳ ಪೈಕಿ ರಸ್ತೆ ಡಾಂಬರಿಕರಣ ಕಾಮಗರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೆ ಹಾಗೂ ಪೂರ್ಣಗೊಳಿಸಲಾಗಿದೆಯೆ ಎಂಬ ಪೂರ್ಣ ವಿವರಗಳನ್ನು ಮುಂದಿನ ಸಭೆಯಲ್ಲಿ ವಿವರಣೆಗಳನ್ನು ನೀಡಲು ಸಹಾಯಕ ಕಾರ್ಯಪಲಕ ಅಭಿಯಂತರರು ರವರಿಗೆ ಸೂಚಿಸಿರುತ್ತಾರೆ.

7) ವಾರ್ಡ್ ವ್ಯಾಪ್ತಿಯಲ್ಲಿ ಅಧಿಕೃತ ಮತ್ತು ಅನಧೀಕೃತ ಜಾಹೀರಾತು ಫಲಕ್ಕ ಮತ್ತು Flexi ಫಲಕಗಳನ್ನು ತೆರವುಗೊಲಿಸುವ ಪೂರ್ಣ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

8) ಸಭೆಯಲ್ಲಿ, ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ, ಕಂದಾಯ ವಸೂಲಿಯಾಗಿದೆಯೆಂದು, ಕಂದಾಯ ಪರಿವೀಕ್ಷಕರು ಸಭೆಯಲ್ಲಿ ಹಾಜರಿದ್ದು ತಿಳಿಸುತ್ತಾ, ಮಾರ್ಚ್ 31ರ ಅಂತ್ಯಕ್ಕೆ ಈ ವರ್ಷದಲ್ಲಿ ಕಂದಾಯತೆರಿಗೆ ಸಂಗ್ರಹ ಹೊಂದಿದ್ದು, ಇಲ್ಲಿಯವರೆಗೂ ರೂ.497.00ಲಕ್ಷಗಳ ಕಂದಾಯ ವಸೂಲಿಯಾಗಿರುತ್ತದೆಂದೂ ಹಾಗೂ ಬಾಕಿ ಬಿ.ಎಂ.ಟಿ.ಎಫ್ ರವರಿಂದ ಬರಬೇಕಾದ ತೆರಿಗೆ ಕಂದಾಯವನ್ನು ವಸೂಲಿ ಮಾಡಲು ಕಂದಾಯ ಪರಿವೀಕ್ಷಕರು ರವರಿಗೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿರುತ್ತಾರೆ.

9) ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಬೆಸ್ಕಾಂರವರು ರಸ್ತೆ ಅಗೆತ ಮಾಡಿ ಕೇಬಲ್ ಅಳವಡಿಸಿದ್ದು, ಸರಿಯಾಗಿ ರಸ್ತೆಗಳನ್ನು ಸರಿಪಡಿಸದೇ ಇರುವುದರ ಬಗ್ಗೆ ಸಂಬಂಧ ಪಟ್ಟ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು ಹಾಗೂ ಕೇಬಲ್‌ಗಳನ್ನು ರಸ್ತೆಯ ಮೇಲ್ಭಾಗದಲ್ಲಿ ಇರುವುದನ್ನು ತೆರವುಗೊಳಿಸಿ ರಸ್ತೆಯನ್ನು ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ತಿಳಿಸಲಾಯಿತು. ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಅಗೆದಿರುವ ರಸ್ತೆಗಳನ್ನು ಸರಿಪಡಿಸಲು ಹಾಗೂ ಹೆಚ್ಚುವರಿಯಾಗಿ ಸ್ಥಳದಲ್ಲೇ ಬಿಟ್ಟಿರುವ ಕೇಬಲ್‌ಗಳನ್ನು ತೆರವುಗೊಳಿಸಲು ಬೆಸ್ಕಾಂ ಇಂಜಿನಿಯರ್ ರವರಿಗೆ ತಿಳಿಸಲು ಸೂಚಿಸಲಾಯಿತು.

10) ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಹೆಚ್ಚಾಗದಂತೆ ಜಾಗ್ರತೆ ವಹಿಸಲು ಮುಂಜಾಗ್ರತಾ ಕ್ರಮವಾಗಿ ಮಾರ್ಷಲ್‌ಗಳಿಗೆ ರಾತ್ರಿ 7.00 ರಿಂದ 9.30ರವರೆಗೆ ವಾರ್ಡ್‌ನಲ್ಲಿ ಸಂಚರಿಸಿ ಸಾಮಾಜಿಕ ಅಂತರ

ಪು.ತಿ.ನೋ

ಕಾಪಾಡಿಕೊಳ್ಳಲು ಹಾಗೂ ಮಾಸ್ಕ ಧರಿಸುವುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹಾಗೂ ಮಾಸ್ಕ ಧರಿಸದಿರುವವರಿಗೆ ದಂಡ ವಿಧಿಸಲು ಕ್ರಮ ಕೈಗೊಳ್ಳುವಂತೆ ಮಾರ್ಷಲ್ ರವರಿಗೆ ತಿಳಿಸಲು ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

11) ತೋಟಗಾರಿಕೆ , ಬೆಸ್ಕಾಂ ಮತ್ತು ಪಾಲಿಕೆಯ ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ಅಧಿಕಾರಿಗಳ ಗೈರು ಹಾಜರಿಗೆ ಪತ್ರ ಬರೆಯಲು ನೋಡಲ್ ಅಧಿಕಾರಿಗಳು ಕಾರ್ಯದರ್ಶಿರವರಿಗೆ ಸೂಚಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಹಾಜರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿಗಳು**
**ಸಹಾಯಕ ಅಭಿಯಂತರರು**
ವಾರ್ಡ್-164, ವಿದ್ಯಾಪೀಠ ವಾರ್ಡ್

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು**
ವಾರ್ಡ್-164, ವಿದ್ಯಾಪೀಠ

ಪ್ರತಿಯನ್ನು:

1) ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್.ಆರ್.ವೃತ್ತರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
2) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘ,ತ್ಯಾನಿ)ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6) ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
7) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8) ವರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಪ್ರತಿ.